ದಿನಾಂಕಃ **20-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಬಿ ಕೆ ಎನ್ ವಕೀಲರಿಂದ,</u>**

1) ನನ್ನ ಗಂಡ ಮೃತರಾಗುವ ಕಾಲಕ್ಕೆ ನನ್ನ ಗಂಡ ಮಂಡ್ಯ ಜಿಲ್ಲೆ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ನನ್ನ ಗಂಡನ ಜೊತೆ ವೈಮನಸ್ಸು ಇರುವ ಕಾರಣ ನಾನು ತವರು ಮನೆಯಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಅನಾರೋಗ್ಯದಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಪ್ರತಿವಾದಿ 1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಜೊತೆ ವಾಸ ಮಾಡದ ಕಾರಣ ನನ್ನ ಗಂಡನ ಅನಾರೋಗ್ಯದ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಗಂಡನ ಚಿಕಿತ್ಸೆಗಾಗಿ ಐದು ಲಕ್ಷ ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ.

2) ನನ್ನ ಗಂಡ ಮರಣ ನಂತರ ನಾನು ಅನುಕಂಪದ ಆಧಾರದ ಮೇಲೆ ಕೆಲಸಕ್ಕೆ ಸೇರಿಕೊಂಡಿರುತ್ತೇನೆ ಎಂದರೆ ಸರಿ. ನನ್ನ ಗಂಡನ ಮರಣ ನಂತರ ಸರ್ಕಾರದ ಸೌಲಭ್ಯಗಳು ನನ್ನ ಖಾತೆಗೆ ಬಂದಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಹಣವನ್ನು 1 ನೇ ಪ್ರತಿವಾದಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಣದಲ್ಲೂ ಸಹ 1 ನೇ ಪ್ರತಿವಾದಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ಸಂದರ್ಭದಲ್ಲಿ 3,50,000/- ಹಣ ಸರ್ಕಾರದಿಂದ ಬಂದಿತ್ತು. 1 ನೇ ಪ್ರತಿವಾದಿ ನನ್ನ ಗಂಡನ ಚಿಕಿತ್ಸೆಗಾಗಿ ಐದು ಲಕ್ಷ ಹಣ ಖರ್ಚು ಮಾಡಿದ್ದು ಅದನ್ನು ನನಗೆ ಮರುಪಾವತಿ ಮಾಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ.

3) ದಾವಾ ಸ್ವತ್ತು ಐಟಂ ನಂ. 1 ಮತ್ತು 2 ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತಾರೆ. ದಾವಾ ಐಟಂ ನಂ.1 ನನ್ನ ಮಾವನ ಹೆಸರಿನಲ್ಲಿ ಇರುತ್ತದೆ. ದಾವಾ

ಐಟಂ ನಂ.2, 1 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಗಳ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ಕ್ರಯಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ದಾವಾ ಐಟಂ ನಂ.1 ನ್ನು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 2 ಆಸ್ತಿಯನ್ನು 2009 ರಲ್ಲಿ ಖರೀದಿ ಮಾಡಿರುತ್ತಾರೆ. ನನ್ನ ಗಂಡನ ಜೀವಂತ ಅವಧಿಯಲ್ಲಿ ನಾನು ನನ್ನ ಗಂಡ ಪ್ರತ್ಯೇಕವಾಗಿದ್ದೆವು ಎಂದರೆ ಸರಿಯಲ್ಲ.

4) ನನ್ನ ಮಾವ ಬಿ ಎಸ್ ಎನ್ ಎಲ್ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಮಾವ ತನ್ನ ಸ್ವಂತ ಆದಾಯದಿಂದ ದಾವಾ ಸ್ವತ್ತು ಐಟಂ ನಂ.1 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ಐಟಂ ನಂ.2 ಆಸ್ತಿಯನ್ನು 1 ನೇ ಪ್ರತಿವಾದಿ ತನ್ನ ತವರು ಮನೆಯಿಂದ ನೀಡಿದ ಒಡವೆಯನ್ನು ಮಾರಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಚಿಕಿತ್ಸೆಗಾಗಿ ಮಾಡಿದ ಸಾಲಗಳನ್ನು ತೀರಿಸಲು ದಾವಾ ಸ್ವತ್ತು ಐಟಂ ನಂ.3 ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.